


ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಪದವಿ ಪಡೆದ ವಿದ್ಯಾರ್ಥಿಗಳ ಜತೆ ವಿಶ್ವವಿದ್ಯಾಲಯದ ಕುಲಸಚಿವ ಎಸ್.ಗಿರಿಧರ್, ಆಡಳಿತ ಮಂಡಳಿ ನಿರ್ದೇಶಕರಾದ ರಿಷಾದ್ ಪ್ರೇಮ್‌ಜಿ, ಕುಲಾಧಿಪತಿ ಅಜೀಂ ಪ್ರೇಮ್‌ಜಿ, ಕುಲಪತಿ ಅನುರಾಗ್ ಬೆಹರ್, ನಿರ್ದೇಶಕರಾದ ಯಾಸ್ಮಿನ್ ಪ್ರೇಮ್‌ಜಿ, ದಿಲೀಪ್ ರಂಜೇಕರ್ ಇದ್ದಾರೆ **ಪ್ರಜಾವಾಣಿ ಚಿತ್ರ**

# ‘ಆಲೋಚನೆ ಆವಿಷ್ಕಾರದ ಬೀಜ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆಲೋಚನೆಗಳು ಆವಿಷ್ಕಾರಗಳ ಬೀಜಗಳಿದ್ದಂತೆ. ಆಲೋಚನೆಗಳಿದ್ದರೆ ಸಾಲದು, ಅವುಗಳನ್ನು ಕಾರ್ಯಗತಗೊಳಿಸುವ ಚಾಕಚಕ್ಯತೆಯನ್ನೂ ಹೊಂದಿರಬೇಕು’ ಎಂದು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಕುಲಾಧಿಪತಿ ಅಜೀಂ ಪ್ರೇಮ್‌ಜಿ ಅಭಿಪ್ರಾಯಪಟ್ಟರು.

ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಶನಿವಾರ ವಿಶ್ವವಿದ್ಯಾಲಯದ ಮೂರನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

‘ದೇಶದಲ್ಲಿ ಎಂತಹ ಸಮಾಜ ಇರಬೇಕೆಂಬ ಬಗ್ಗೆ ಕನಸು ಕಾಣಬೇಕು. ಆ ಕನಸನ್ನು ವಾಸ್ತವವನ್ನಾಗಿ ಪರಿವರ್ತಿಸಲು ಪಣತೊಡಬೇಕು. ಆಲೋಚನೆಗಳನ್ನು ಕಾರ್ಯಗತಗೊಳಿಸಬೇಕಾದರೆ ಪರಿಶ್ರಮ, ದೃಢನಿರ್ಧಾರವೂ ಮುಖ್ಯ’ ಎಂದು ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

‘ಇನ್ನೊಬ್ಬರ ಅಭಿಪ್ರಾಯವನ್ನು ಆಲಿಸುವುದು ಒಂದು ಕೌಶಲ. ತಿಳಿದವರು, ನೀವು ಹೇಳಿದ್ದೆಲ್ಲವನ್ನೂ ಒಪ್ಪಿಕೊಳ್ಳುವುದಿಲ್ಲ. ಅವರು ನಿಮ್ಮ ಆಲೋಚನೆ, ಅಭಿಪ್ರಾಯಗಳನ್ನು ಪ್ರಶ್ನಿಸುವಾಗ ಕಿರಿಕಿರಿ ಎನಿಸಬಹುದು. ಅಂತಹವರ ಮಾತನ್ನು ಆಲಿಸಿದರೆ, ಹೊಸ ದೃಷ್ಟಿಕೋನವನ್ನು ಪಡೆಯುತ್ತೀರಿ’ ಎಂದರು.

ವಿವಿ ಕುಲಪತಿ ಅನುರಾಗ್ ಬೆಹರ್ ಮಾತನಾಡಿ, ‘25 ರಾಜ್ಯಗಳ ವಿದ್ಯಾರ್ಥಿಗಳು ನಮ್ಮ ವಿವಿಯಲ್ಲಿ ಕಲಿಯುತ್ತಿದ್ದಾರೆ. ವಿದ್ಯಾರ್ಥಿಗಳೆಲ್ಲ ಒಟ್ಟಾಗಿ ಕಲಿಯುವ ಅವಕಾಶವನ್ನು ವಿವಿ ಒದಗಿಸಿದೆ. ನಮ್ಮ ಸಂಸ್ಥೆ ಪುಟ್ಟ ಭಾರತ ಇದ್ದಂತೆ. ಎಂಟು ರಾಜ್ಯ ಸರ್ಕಾರಗಳ ಜತೆ ಸೇರಿ ಶೈಕ್ಷಣಿಕ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ’ ಎಂದರು.

ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಭರತ್‌ಲಾಲ್ ಮೀನಾ, ವಿಶ್ವವಿದ್ಯಾಲಯದ ಆಡಳಿತ ಮಂಡಳಿ ನಿರ್ದೇಶಕರಾದ ರಿಷಾದ್ ಪ್ರೇಮ್‌ಜಿ, ಯಾಸ್ಮೀನ್ ಪ್ರೇಮ್‌ಜಿ, ಎ.ಕೆ.ಶರ್ಮ, ದಿಲೀಪ್ ರಂಜೇಕರ್, ವಿಶ್ವವಿದ್ಯಾಲಯದ ಕುಲಸಚಿವ ಎಸ್.ಗಿರಿಧರ್ ಉಪಸ್ಥಿತರಿದ್ದರು. 180 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.